ಕಥೆ

# ಬಂದಿ



**ಮುದಿರಾಜ್ ಬಾಣದ್**

ಕಲೆ: ಬಾದಲ್ ನಂಜುಂಡಸ್ವಾಮಿ

ದೆಹಲಿಯ ಹಜರತ್ ನಿಜಾಮುದ್ದೀನ್ ರೈಲ್ವೆ ಸ್ಟೇಶನಿನಲ್ಲಿ ಇಳಿದ ರಾಮಚಂದ್ರ ಸೀದಾ ಕ್ಯಾಬ್ ಬುಕ್ ಮಾಡಿದವನೆ ಹಜರತ್ ನಿಜಾಮುದ್ದೀನ್ ದರ್ಗಾಕ್ಕೆ ಹೊರಟ. ಮೊದಲಿನಿಂದಲೂ ಅಷ್ಟೇ, ಪ್ರತಿ ಗುರುವಾರ ಬಂತೆಂದರೆ ಸಾಕು, ತನ್ನ ಊರಲ್ಲಿನ ದರ್ಗಾಕ್ಕೆ ಹೋಗಿ ಎರಡು ಊದಿನಕಡ್ಡಿ ಹಚ್ಚಿ ಬಂದರೇನೆ ಸಮಾಧಾನ. ಚಂದ್ರವತಿಗೆ ರಾಮಚಂದ್ರನ ಹೆರಿಗೆ ಆಗುವಾಗ ತುಂಬಾ ತ್ರಾಸಾಗಿತ್ತಂತೆ. ಆಗ ಚಂದ್ರವತಿಯ ತಂದೆ ದರ್ಗಾಕ್ಕೆ ಹೋಗಿ ಮುಲ್ಲಾಸಾಬ್ ಕೊಟ್ಟ ತಾಯತ ತಂದು ಕಟ್ಟಿದ ಮೇಲೆ ಸಲೀಸಾಗಿ ಹೆರಿಗೆ ಆಯಿತಂತೆ. ಆಗಿನಿಂದಲೂ ಚಂದ್ರವತಿ ಪ್ರತಿ ಗುರುವಾರ ದರ್ಗಾಕ್ಕೆ ಹೋಗಿ ಎರಡು ಊದುಬತ್ತಿ ಹಚ್ಚಿಬರತೊಡಗಿದಳು. ರಾಮಚಂದ್ರ ಬೆಳೀತಾ ಬೆಳೀತಾ ಅವನನ್ನು ಕರೆದುಕೊಂಡು ಹೋಗಿ ಬರತೊಡಗಿದ ಮೇಲೆ ರಾಮಚಂದ್ರನಿಗೂ ದರ್ಗಾಕ್ಕೆ ಹೋಗಿ ಬರುವುದು ತುಂಬಾ ಇಷ್ಟವಾಗತೊಡಗಿತು. ತುಂಬಾ ಖುಷಿಯಿಂದ ಹಜರತ್ ನಿಜಾಮುದ್ದೀನ್ ದರ್ಗಾದೊಳಗೆ ಕಾಲಿಟ್ಟ ರಾಮಚಂದ್ರನಿಗೆ ಮೊದಲು ಕಂಡಿದ್ದು ಅತ್ತರಿನ ಪರಿಮಳ ಹೊತ್ತ ಸಾಲು ಸಾಲು ಹೂವಿನ ಅಂಗಡಿಗಳು, ಬಗೆ ಬಗೆಯ ಟೊಪ್ಪಿಗೆ ಅಂಗಡಿಗಳು, ಕಲರ್ ಕಲರಿನ ಚಾದರಗಳು, ಸುಮಾರು ಅರ್ಧ ಕಿಲೋ ಮೀಟರಿನಷ್ಟು ನಡೆದಕೊಂಡು ಹೋಗುವ ದಾರಿಯಲ್ಲಿ ಹೂವಿನ ರಾಶಿಗಳ ಮಧ್ಯೆ ನಡೆಯುತ್ತ ಹೋಗುವುದೇ ಒಂದು ಚೆಂದವೆನಿಸಿತು ರಾಮಚಂದ್ರನಿಗೆ. ಮೀಟಿಂಗ್ ಮುಗಿದಮೇಲೆ ಚಲೆಚಿಟ್ಟು ಹಿಡಿದು ಸಾಕಾಗಿ ಹೋಗಿದ್ದ ರಾಮಚಂದ್ರನಿಗೆ ಈ ದಿನ ಗುರುವಾರ ಅಂತ ನೆನಪಾಗಿದ್ದೇ ತಡ, ದೆಹಲಿಯ ಪ್ರಸಿದ್ಧ ಹಜರತ್ ನಿಜಾಮುದ್ದೀನ್ ದರ್ಗಾಕ್ಕೆ ಭೇಟಿ ಕೊಡಬೇಕೆನಿಸಿ ಕೂಡಲೇ ಇಲ್ಲಿಗೆ ಓಡಿ ಬಂದಿದ್ದ. ಇಲ್ಲಿಯ ವಾತಾವರಣ ಅವನನ್ನು ಬೇರೆಯದೇ ಲೋಕಕ್ಕೆ ಕರೆದುಕೊಂಡು ಹೋಗಿತ್ತು.

ಹಜರತ್ ನಿಜಾಮುದ್ದೀನ್ ದರ್ಗಾದೊಳಗೆ ಕಾಲಿಟ್ಟ ರಾಮಚಂದ್ರ ತಾನು ತಂದಿದ್ದ ಗುಲಾಬಿ ಹೂವಿನ ಪಕಳೆಗಳನ್ನು ಧನ್ಯತಾಭಾವದಿಂದ ಅಲ್ಲಿ ಅರ್ಪಿಸಿ ಹೊರಬಿದ್ದವನಿಗೆ ದರ್ಗಾದ ಹೊರಬಾಗಿಲಲ್ಲಿ ತುಂಬಿದ ಬಸಿರ ಹೊಟ್ಟೆಯ ಮೇಲೆ ಬಿಳಿಬಿಳಿ ಪಟ್ಟೆಯಿದ್ದ ಬೆಕ್ಕು, ರಾಜನ ಠೀವಿ ಹೊತ್ತು ತನ್ನ ಮುದ್ದಾದ ಚೂಪು ಕಣ್ಣುಗಳಿಂದ ಗೋಣನ್ನು ಒಪ್ಪಾರೆ ಮಾಡಿಕೊಂಡು, ಘನಗಾಂಭೀರ್ಯದಿಂದ ತದೇಕಚಿತ್ತವಾಗಿ ಅಂಗಳದಲ್ಲಿ ಪೇಟಿ ಬಾರಿಸುತ್ತ ಶಾಹಿರಿಗಳನ್ನು ಹಾಡುತ್ತಿದ್ದ ವ್ಯಕ್ತಿಯನ್ನು ನೋಡುತ್ತಿತ್ತು. ಆ ಬೆಕ್ಕಿನ ಪಕ್ಕದಿಂದ ಕೆಲವರು, ಅದರ ಸುತ್ತುವರೆದು ಇನ್ನಷ್ಟೂ ಜನರು, ಭಯಭಕ್ತಿಯಿಂದ ದರ್ಗಾದ ಹೊರಗೆ ಬಂದು